ಎಷ್ಟು ಗಂಭೀರವಾಗಿ ಪರಿಗಣಿಸುತ್ತಾರೆ ಎನ್ನುವುದನ್ನು ತೋರಿಸುತ್ತದೆ. ತಮ್ಮ ಪ್ರತಿ ಹೊಸ ಪುಸ್ತಕದಲ್ಲೂ ಮುಂಚಿನ ಶೈಲಿಯನ್ನು ಮುರಿದು, ಹಿಂದಿನ ನೆಲೆಯನ್ನು ಮೀರಿನಿಲ್ಲುವ ಗ್ಲುಕ್ ತಮ್ಮ ನುಡಿಗಟ್ಟು, ಶೈಲಿಯೊಂದಿಗೆ ಸತತ ಪ್ರಯೋಗಮಾಡುತ್ತ, ತನ್ನನ್ನು ಮರುರೂಪಿಸಿಕೊಳ್ಳುವುದಕ್ಕಾಗಿ ಅಸ್ವಸ್ಥರಾಗಿಯೇ ಉಳಿಯುವ ಕವಯಿತ್ರಿ.

ಕಾವ್ಯವೆಂದರೆ ಮೂಲತಃ ವಿವರಣೆಯಲ್ಲ, ಅದೊಂದು ಬಗೆಯ ಬೆರಗು ಎನ್ನುವುದನ್ನು ನಮಗೆ ವೇದ್ಯ ಮಾಡುವ ಗ್ಲುಕ್, ಕಾವ್ಯದಲ್ಲಿ ಕ್ಲಿಷ್ಟತೆಯ ರಿಸ್ಕ್ ತೆಗೆದು ಕೊಳ್ಳುವುದರಿಂದಲೇ ನಮ್ಮೊಳಗಿನ ಕರಾಳ ಪ್ರಶ್ನೆಗಳನ್ನು ನಮಗೆ ನೆನಪಿಸುತ್ತಾರೆ. ವಾಸ್ತವದೊಂದಿಗಿನ ಉಗ್ರ ಅನುಸಂಧಾನವಿರುವ ಕವನಗಳನ್ನು ಬರೆಯುವ ಗ್ಲುಕ್ ಅವರದು ದಿಟ್ಟ, ಮುಚ್ಚುಮರೆ ಇಲ್ಲದ, ಅಸಂತುಷ್ಟಿಯ ಕವನಗಳು. ಗಾಯಗಳನ್ನು ನೇವರಿಸುವ ಪದಗಳು. ಅವರ ಸಾಲುಗಳು, ಸುತ್ತಣ ನಿತ್ಯವನ್ನು ವೈಭವೀಕರಿಸದೇ, ಕೈಗೆಟುಕುವ ಸಹಜದಲ್ಲಿಯೇ ಒಂದು ಹುರುಪನ್ನು, ಆತಂಕವನ್ನು, ಅರ್ಥಗರ್ಭಿತ ಚಿತ್ರಣವನ್ನು

